ಕರ್ನಾಟಕ ವಿಧಾನಪರಿಷತ್ತಿನಲ್ಲಿ ೩೧-೫-೧೯೮೮ ರಂದು ತಿದ್ದುಪಡಿಗಳೊಂದಿಗೆ ಶಿಫಾರಸ್ಸು ಮಾಡಿ ವಿಧೇಯಕವನ್ನು ಹಿಂದಿರುಗಿಸಲಾಗಿದೆಯೆಂದು ತಿಳಿಸುತ್ತೇನೆ.

೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ)ವಿಧೇಯಕ.''

ಈಗ ಕಾರ್ಯದರ್ಶಿ ಅವರಿಂದ ತಿದ್ದುಪಡಿ ವಿಧೇಯಕದ ವಂಡನೆ. ಕಾರ್ಯದರ್ಶಿ ಪರವಾಗಿ ಜಂಟಿ ಕಾರ್ಯದರ್ಶಿ ಮಂಡಿಸಿ.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೇ, ಕಾರ್ಯದರ್ಶಿಯವರ ಪರವಾಗಿ ಜಾಯಿಂಟ್ ಸೆಕ್ರೆಟರಿಯವರು ಮಂಡನೆ ಮಾಡುವುದಕ್ಕೆ ತಾವು ಅವಕಾಶ ಕೊಡಬಹುದು.

ಅಧ್ಯಕ್ಷರು.—ಸಿದ್ದಲಿಂಗಯ್ಯನವರೆ, ತಾವು ಮಂಡನೆ ಮಾಡಿ.

ಜಂಟಿ ಕಾರ್ಯದರ್ಶಿ.—ಮಾನ್ಯ ಅಧ್ಯಕ್ಷರೆ, ೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕಕ್ಕೆ ಕರ್ನಾಟಕ ವಿಧಾನ ಪರಿಷತ್ತು ಶಿಫಾರಸ್ಸು ಮಾಡಿರುವ ತಿದ್ದುಪಡಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ತಿದ್ದುಪಡಿಗಳನ್ನು ಮಂಡಿಸಲಾಯಿತು.

ಶಾಸ ರಚನಾ ಕಾರ್ಯಕಲಾಪಗಳು

THE KARNATAKA SALES TAX (AMENDMENT) BILL, 1988.

Motion to consider

SRI A. LAKSHMISAGAR.—(Minister for Law Parliamentary Affairs, Sericulture (On behalf of the Chief Minister): I beg to move

> "That the recommendations of the Karnatak Legislative Council in respect of the Karnataka Sales Tax (Amendment) Bill, 1988 as passed by the Legislative Assembly and recommended by the Karnataka Legislative Council be taken into consideration."

The question was proposed

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಷೆಡ್ಯೂಲಿನ ನಿಗಿನೇ ಪೇಜಿನಲ್ಲಿ ಒನೇ ಕಲಮಿನಲ್ಲಿ ಮೇಲಿನದು ಕೆಳಗಡೆ ಹೋಗಿದೆ, ಕೆಳಗಿನದು ಮೇಲ್ಗಡೆ ಬಂದಿದೆ. ಇದನ್ನು ತಿದ್ದುಪಡಿ ಮಾಡಬೇಕು ಎಂದು ಬಂದಿರತಕ್ಕಂಥ ತಿದ್ದುಪಡಿ ಇದಾಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮೇಲಿನದು ಕೆಳಗಡೆ ಹೋಗಿದೆ, ಕೆಳಗಡೆಯದು ಮೇಲೆ ಹೋಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಮುಂದ್ರಾರಾಕ್ಷಸನ ಹಾವಳಿಯಿಂದ ಆಗಿರತಕ್ಕಂಥ ತೊಂದರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಈ ಕಡೆಯದು ಆ ಕಡೆ, ಆ ಕಡೆಯದು ಈ ಕಡೆ ಹೋಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ —ಇದು ಮುದ್ರಾರಾಕ್ಷಸನ ಹಾವಳಿಯಿಂದ ಕೆಲವು ಸಲ ಆಗುತ್ತದೆ, ಇದೆಲ್ಲಾ ಕಾನಡೆಯವರಿಗೆ ಗೊತ್ತಾಗುವುದಿಲ್ಲ. ಈ ಮುದ್ರಾರಾಕ್ಷಸನ ಹಾವಳಿಯಿಂದ ತಪ್ಪಿಸಿ ಕೊಳ್ಳುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕು ಎಂದು ವಂನವಿ ಮಾಡಿಕೊಳ್ಳುತ್ತೇನೆ.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

೧೩ ನೇ ಖಂಡ

ಅಧ್ಯಕ್ಷರು.— ಖಂಡ ೧೩ ಕ್ಕೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಯಾಗಿರುವಂತೆ ಈ ವಿಧೇಯಕದ ಅಂಗವಾಗಿರುತ್ತದೆ,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ೧೩ ತಿದ್ದುಪಡಿಯಾದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧ ಇತ್ಯಾದಿ:—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ' ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ತಿದ್ದುಪಡಿಯಾದ ವಿಧೇಯಕ ಈ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವನ್ನು ಅಂಗೀಕರಿಸಲಾಯಿತು.

ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ತಿದ್ದುಪಡಿಯಾದ ವಿಧೇಯಕ ಈ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವದ ಅಂಗೀಕಾರ.

ಶ್ರೀ ಎ. ಲಕ್ಷ್ಮೀಸಾಗರ್.— ''೧೯೮೮ ನೇ ಇಸವಿ ಕರ್ನಾಟಕ ಮಾರಾಟ ತಿದ್ದುಪಡಿ ವಿಧೇಯಕದ ೧೩ ನೇ ಖಂಡಕ್ಕೆ ಕರ್ನಾಟಕ ವಿಧಾನ ಪರಿಷತ್ತು ಮಾಡಿರುವ ತಿದ್ದುಪಡಿಗಳನ್ನು ಸಭೆಯು ಅಂಗೀಕರಿಸಬೇಕು.

ಅಧ್ಯಕ್ಷರು —ಪ್ರಸ್ತಾವ ಏನೆಂದರೆ, ' ೧೯೮೮ ನೇ ಇಸವಿ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕದ ೧೩ನೇ ಖಂಡಕ್ಕೆ ಕರ್ನಾಟಕ ವಿಧಾನ ಪರಿಷತ್ತು ಮಾಡಿರುವ ತಿದ್ದುಪಡಿಗಳನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಅನುಮೋದನೆ ನೀಡಲಾಯಿತು

ಅಧ್ಯಕ್ಷರು,—ಈಗ ಅರ್ಧಗಂಟೆ ಕಾಲಾವಧಿ ಚರ್ಚೆ, ಕಾನಡೆಯವರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

ಶ್ರೀ ಕೆ. ಮಲ್ಲಪ್ಪ.—ಯುವಜನ ಸೇವಾ ಇಲಾಖೆ ಮೇಲೆ ೨ ನಿಮಿಷ ಮಾತನಾಡುತ್ತೇನೆ, ಸ್ವಾಮಿ.

ಅಧ್ಯಕ್ಷರು.— ನಾನು ಈಗಾಗಲೇ ರೂಲಿಂಗ್ ಕೊಟ್ಟು ಆಗಿದೆ. ಚರ್ಚೆ ಮುಕ್ತಾಯವಾಯಿತು, ಉತ್ತರ ನಾಳೆ ಎಂದು ಹೇಳಿಬಿಟ್ಟಿದ್ದೇನೆ. ನಾಳೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ, ಈಗ ಚರ್ಚೆಗೆ ಅವಕಾಶವಿಲ್ಲ,